# ಚಿನ್ನು ಟೀಚರ್

ಸೀರೆ ಉಟ್ಕೊಂಡು ಟೀಚರ್ ಆಗಿ
ಪಾಠಕ್ಕೆ ನಿಂತ್ಲು ಚಿನ್ನು
ಅಜ್ಜಿ ಮನೆ ಗೋಡೆ ಮೇಲೆ
ಅ ಆ ಇ ಈ ಬರೆದ್ಲು

ಸಿಟ್ಡೌನ್ ಅಂತ ಬೆರಳು ತೊರಿಸಿ
ಅಜ್ಜಿ ಅಮ್ಮಂಗೆ ಕೂಡಿಸಿದ್ಲು
ಕನ್ನಡದಲ್ಲಿ ಒಂದು ಎರಡು
ಮಗ್ಗಿ ಕಲಿಸುವೆ ಎಂದ್ಲು

ಎ ಫಾರ್ ಆಪಲ್
ಅಜ್ಜಿ ಓದಲು ಎದ್ಲು
ಅಜ್ಜಿ ನಿಂಗೆ ಇಂಗ್ಲಿಷ ಲೈಕ್
ಕನ್ನಡ ಕಲಿ ಎಂದ್ಲು

ಎ ಫಾರ್ ಅಬ್ದುಲ್ ಕಲಾಂ
ಮೇಸ್ತ್ರಿಗೊಂದು ಸಲಾಂ
ಬಿ ಫಾರ್ ಬಾಬಾಸಾಹೇಬ್
ಸೆಲ್ಯೂಟ್ ಹೊಡಿ ಎಂದ್ಲು

ಒಓಔ ಬಿಡದೇ ಕಲಿಸಿ
ಪಾಠ ಮಾಡಿದ್ಲು ನಿಂತು
ಒಂದು ಎರಡು ಬಾಳೆಲೆ
ಹರಡಿ ಊಟಕ್ಕೇಳು ಎಂದ್ಲು




# ತಂಗಿ ಸೀಟು

ತಂಗಿಬೇಕು ತಂಗಿ ಬೇಕು
ಕೇಳ್ತಾ ಇದ್ದೆ ಅಮ್ಮಂಗೆ
ಆಸ್ಪತ್ರೆಯಿಂದ ತಂಗಿನ್ನ
ಕರಕೊಂಡ
ಬಂದೆ ಬಿಟ್ಲು ಮನೆಗೆ

ಗುಲಾಬಿ ಬಣ್ಣ ಕಣ್ಣೇ ಸಣ್ಣ
ಮುದ್ದುಗೊಂಬೆ ತಂಗಿ
ಎತ್ತಿಕೊಳ್ಳಲು ಅಜ್ಜಿ ಬಿಡಲ್ಲ
ಜಗ್ಗಿಬಿಡ್ತಾಳೆ ಅಂಗಿ

ಪಾಪುಗಿಂತ ಎಷ್ಟು ಎತ್ತರ
ಅಳತೆ ಮಾಡಿ ನೋಡು
ಮಮ್ಮು ಹಾಲು ತಿನಿಸಬೇಕಂತೆ
ಹಸಿವಾಗಿ ಅಳುತ್ತೆ ನೋಡು

ಎಣ್ಣೆ ಹಚ್ಚಿ ಬೆಣ್ಣೆ ಕೈಕಾಲು
ತಿಕ್ಕಿ ಎರೆಯುವೆ ನಾನು
ಇಡೀ ದಿನ ಮಲಗೇ ಇರುತ್ತೆ
ನಿದ್ದೇ ಬುರಕಿ ಅವಳು

ಚಿನ್ನುನ ಜೋಳಿಗೆ ತಂಗಿಗಾತು
ತೂಗತಾಳೆ ಅಮ್ಮ ಹಾಡಿ
ಸ್ವೆಟರ್ ಕುಂಚಗಿ ಚಿಕ್ಕದಾಯ್ತು
ತಂಗಿಗೆ ಕೊಟ್ಟೆ ನೋಡಿ

ತಂಗಿನ್ನ ಕಂಡ್ರೆ ಕೋಪ ಬಹಳ
ಯಾಕೆ ಅಂತ ಕೇಳಿ
ಅಮ್ಮನ ಪಕ್ಕ ಅವಳ ಸೀಟು
ನಾನೆಲ್ಲಿ ಮಲಗಲಿ ಹೇಳಿ?



ಚಿತ್ರ: ಮಂಜುನಾಥ ಹುಲಿಕೊಪ್ಪದ

# ಬೆಂಕಿ ಬೆಂಕಿ ಎಂದು ಚೀರಿ

■ ಕೆ. ಶ್ರೀನಿವಾಸರಾವ್

ನಡು ಮಧ್ಯಾಹ್ನ ಆಗಸದಲ್ಲಿ ಚಂದ್ರ ನಗುತ್ತಿದ್ದ. ಭಾರೀ ಬಿಸಿಲು. ರಾಮುವಿಗೆ ಸೈಕಲ್‌ನಲ್ಲಿ ಲಾಂಗ್‌ಡ್ರೈವ್ ಹೋಗುವ ಬಯಕೆಯಾಯಿತು. ತಕ್ಷಣ ಸೋಮುಗೆ ಫೋನ್ ಮಾಡಿ ಕರೆಸಿದ. ಸೈಕಲ್‌ನಲ್ಲಿ ಹೊರಟರು. ಇಬ್ಬರಿಗೂ ವೇಗ ಅಂದ್ರೆ ಪ್ರಾಣ. 100 ಕಿ.ಮೀ ಸ್ಪೀಡ್‌ನಲ್ಲಿ ಸೈಕಲ್ ಸಾಗಿತ್ತು. ಹೋಗುತ್ತಾ ಹೋಗುತ್ತಾ ಊರು ದಾಟಿ ಕಾಡಿನೊಳಗೆ ಪ್ರವೇಶಿಸಿತ್ತು. ದಟ್ಟ ಕಾಡು, ಭಾರೀ ಗಾತ್ರದ ಮರಗಳ ಕೊಂಬೆಗಳಲ್ಲಿ ಮೀನುಗಳು ತೂಗಾಡುತ್ತಿದ್ದವು. ಪೊಟರೆಗಳಲ್ಲಿ ಭಯಂಕರ ಮೊಸಳೆಗಳು ನಿದ್ರಿಸುತ್ತಿದ್ದವು. ಎದುರಿಗೆ ಒಬ್ಬ ಎರಡೂ ಕೈಗಳಿಲ್ಲದ ಮನುಷ್ಯ ತೆಪ್ಪದಲ್ಲಿ ಹುಟ್ಟು ಹಾಕುತ್ತಾ ಬಂದವ ಇನ್ನೇನು ಇವರನ್ನು ಬೀಳಿಸುವನೇನೋ ಎನ್ನುವಷ್ಟರಲ್ಲಿ ಪಕ್ಕದಲ್ಲಿ ಸಾಗಿ ಹೋದ. ಸೈಕಲ್ ಸಾಗಿತ್ತು. ಹೋಗುತ್ತಾ ಹೋಗುತ್ತಾ ಸಮುದ್ರದೊಳ ಹೊಕ್ಕಿತ್ತು. ಭೀಕರ ಆಳೆತ್ತರದ ಅಲೆಗಳ ನಡುವೆ ಸೈಕಲ್‌ನಲ್ಲಿ ನೆಗೆಯುತ್ತಾ ಹರ್ಷದಿಂದ ಸಾಗಿದರು. ಎದುರಿಗೊಂದು ಹೆಬ್ಬುಲಿ ದೋಸೆ ತಿನ್ನುತ್ತಾ ಕುಳಿತಿತ್ತು. ಸುದೈವವಶಾತ್ ಅದು ಇವರನ್ನು ನೋಡಲಿಲ್ಲ. ಸ್ವಲ್ಪ ದೂರದಲ್ಲಿ ಸಮುದ್ರದ ತಳದಲ್ಲಿ ಪ್ರಕಾಶಮಾನವಾಗಿ ಏನೋ ಕಂಡಂತಾಯಿತು. ಕುತೂಹಲದಿಂದ ಸೈಕಲನ್ನು ಆಳಕ್ಕಿಳಿಸಿ ನೋಡಿದರೆ ಏನಾಶ್ಚರ್ಯ! ಸಖೇದಾಶ್ಚರ್ಯದಿಂದ ಒಳ ಹೊಕ್ಕರು. ಒಂದು ಕೋಣೆಯಲ್ಲಿ ಪಿಜ್ಜಾ, ಬರ್ಗರ್, ಐಸ್‌ಕ್ರೀಂ, ಡೈರಿಮಿಲ್ಕ್ ಎಲ್ಲವನ್ನೂ ಇಟ್ಟಿದ್ದರು. ಹಸಿದಿದ್ದ ಇಬ್ಬರೂ ಚೆನ್ನಾಗಿ ತಿಂದು ಮುಂದಿನ ಕೋಣೆಗೆ ಹೋದರು. ಅಲ್ಲೊಬ್ಬ ಹರೆಯದ ಸುಂದರಿ ಅಳುತ್ತಾ ಕುಳಿತಿದ್ದಳು. ರಾಮು, ಸೋಮು ಅವಳ ಬಳಿ ಹೋಗಿ 'ಏಕೆ ಅಳುತ್ತಿರುವೆ?' ಎಂದು ಕೇಳಿದರು.

'ನನಗಿನ್ನೂ ಮದುವೆಯಾಗಿಲ್ಲ, ನಿಮ್ಮಲ್ಲಿ ಒಬ್ಬರು ನನ್ನನ್ನು ಮದುವೆಯಾಗುವಿರಾ?' ಅವಳ ಮಾತನ್ನು ಕೇಳಿ ಒಮ್ಮೆ ಅವಳ ರೂಪರಾಶಿಯನ್ನು ದಿಟ್ಟಿಸಿ ನೋಡಿದರು. ಅಬ್ಬಾ! ಒಕ್ಕಣ್ಣು, ಬದನೆ ಮೂಗು, ಆನೆಯ ಕಿವಿ, ಗೊರಿಲ್ಲಾದಂತ, ಪೊರಕೆಯಂತಹ ಕೇಶರಾಶಿ, ಛೀ! ಇವಳನ್ನು ಮದುವೆಯಾಗುವುದೇ?

ಒಮ್ಮೆಲೇ ಇಬ್ಬರೂ ಸೈಕಲನ್ನು ಏರಿ ನಾಗಾಲೋಟದಿಂದ ಸಮುದ್ರದ ಮೇಲೆ ಬಂದರು. ಅಪಾರ ವೇಗದಿಂದ ಸೈಕಲ್ ತುಳಿದು ರಸ್ತೆ ತಲುಪಿ ಮುಂದೆ ಸಾಗಿದರು. ಪ್ರಯಾಣ ಸಾಗಿತ್ತು. ಎದುರಿನಲ್ಲೊಂದು ಶಾರ್ಕ್ ಬಾಯಿ ತೆರೆದು ನಿಂತಿತ್ತು! ರಾಮು ಧೈರ್ಯದಿಂದ ಸೈಕಲನ್ನು ದೌಡಾಯಿಸಿಕೊಂಡು ಅದರಿಂದ ದೂರ ಬಂದ. ಮನೆಯಿಂದ ತುಂಬಾ ದೂರ ಬಂದಿದ್ದೇವೆ. ಈಗ ಮನೆಗೆ ಹೋಗುವುದು ಹೇಗೆ? ಅಷ್ಟರಲ್ಲಿ ದೂರದ ಗುಡ್ಡದ ಮೇಲೊಂದು ವಿಮಾನ ಇವರ ಊರಿಗೇ ಹೊರಟುನಿಂತಿದ್ದು ಕಂಡಿತು. ರಾಮು ಸೋಮುಗೆ ಹೇಳಿದ.

'ಬೇಗ ಓಡಿ ಹೋಗಿ 2 ಸೀಟಿಗೆ ಕರವಸ್ತ್ರ ಹಾಕಿ ಸೀಟು ಹಿಡಿದಿರು. ನಾನು ಸೈಕಲ್‌ನಲ್ಲಿ ಬರುತ್ತೇನೆ'. ಸೋಮು ಅದರಂತೆ ಓಡಿಹೋಗಿ 2 ಸೀಟು ಹಿಡಿದು ಕುಳಿತ. ವಿಮಾನ ಹೊರಟಿತು. ಕೊಂಚ ದೂರ ಸಾಗಿತ್ತಷ್ಟೇ, ಒಮ್ಮೆಲೇ ಢಮಾರ್ ಶಬ್ದ! ವಿಮಾನಕ್ಕೆ ಬೆಂಕಿ ತಗುಲಿತ್ತು. 'ಅಯ್ಯೋ! ಅಮ್ಮಾ, ಬೆಂಕಿ, ಬೆಂಕಿ!' ಅಮ್ಮ ಬೆನ್ನಿಗೆ ಎರಡು ಅಪ್ಪಚ್ಚಿ ಕೊಟ್ಟಾಗಲೇ ರಾಮುವಿಗೆ ಎಚ್ಚರ ಓ! ಹಾಗಾದರೆ ಇಷ್ಟು ಹೊತ್ತು ಕಂಡದ್ದೆಲ್ಲ ಕನಸೇ?